# ಚಂದ್ರಶೇಖರ ಕಂಬಾರರ ಶಿವನ ಡಂಗುರ ಕಾದಂಬರಿ: ನಗರ ಮತ್ತು ಗ್ರಾಮ ಸಂಸ್ಕೃತಿಯ ಸಂಘರ್ಷ

**ವೆಂಕಟೇಶ ಪಿ.**

ಸಂಶೋಧನಾರ್ಥಿ, ಮೈಸೂರು ವಿಶ್ವವಿದ್ಯಾನಿಲಯ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.

DOI: https://doi.org/10.5281/zenodo.15791452

## ABSTRACT:

ಇಪ್ಪತ್ತೊಂದನೆಯ ಶತಮಾನದ ಕನ್ನಡ ಲೇಖಕರಲ್ಲಿ ಪ್ರಮುಖ ಕವಿ–ನಾಟಕಕಾರ ಚಂದ್ರಶೇಖರ ಕಂಬಾರ ಅವರ ಇತ್ತೀಚಿನ ಕಾದಂಬರಿ 'ಶಿವನ ಡಂಗುರ'. ಕಂಬಾರರ ಬಹುತೇಕ ಕಥೆ ಮತ್ತು ನಾಟಕಗಳಲ್ಲಿ ಸಮಕಾಲೀನ ಚರಿತ್ರೆಯನ್ನು ಜನಪದ ಕಥೆಗಳ ಮೂಲಕ ಪುರಾಣದ ಮೂಲಕ ಹೇಳುತ್ತಿದ್ದರು. ಆದರೆ ಈಗ ಅವರು ಸಮಕಾಲೀನ ಜೀವನವನ್ನು ನೇರವಾಗಿ ಮುಖಾಮುಖಿಯಾಗಿಸುತ್ತಾ ಕೃತಿಗಳನ್ನು ರಚಿಸುತ್ತಿದ್ದಾರೆ. ಅಂತಹ ಒಂದು ಕೃತಿಗೆ ಒಂದು ಉತ್ತಮ ಉದಾಹರಣೆಯಾಗಿ 'ಶಿವನ ಡಂಗುರ' ಕಾದಂಬರಿ ಎಂದು ಹೇಳಬಹುದು. ದೇಸಿ ಪ್ರಜ್ಞೆಯನ್ನು ಮೂಲಸ್ಥಾಯಿಯಾಗಿ ಮತ್ತು ಜಾಗತಿಕ ಪ್ರಜ್ಞೆಯ ಆವರಣದೊಳಗೆ ಕಂಬಾರರು ಕಾದಂಬರಿಯನ್ನು ರಚಿಸಿದ್ದಾರೆ. ಕಂಬಾರರು ಸಂವೇದನೆ, ಆಕೃತಿಗಳೆರಡಲ್ಲೂ ಅಪ್ಪಟ ಭಾರತೀಯ ಲೇಖಕ.

ಭಾರತೀಯ ಸಮಾಜದಲ್ಲಿರುವ ಶೋಷಣೆ, ಜಾತಿ ತಾರತಮ್ಯ, ಲಿಂಗಭೇದ ಹಾಗೂ ಹಿಂಸಾ ಪ್ರವೃತ್ತಿಯು ಪ್ರಸ್ತುತ ಕಾಲಘಟ್ಟದಲ್ಲಿ ಪಡೆದುಕೊಂಡಿರುವ ಹೊಸರೂಪಗಳನ್ನು ಈ ಕಾದಂಬರಿಯು ಬಿಂಬಿಸುತ್ತದೆ. ಕೇವಲ ಲೌಕಿಕ ವಾಸ್ತವಗಳಷ್ಟೆ ಸಂಸ್ಕೃತಿಯನ್ನು ರೂಪಿಸುವುದಿಲ್ಲ, ಭಾವಜಗತ್ತು, ಲೋಕೋತ್ತರ ಸಂಗತಿಗಳು ಕೂಡ ಸಂಸ್ಕೃತಿಯ ಭಾಗವಾಗಿರುತ್ತವೆ. ಲೌಕಿಕ ವ್ಯವಸ್ಥೆಯ ಅಸಮಾನತೆಗಳ ವಿರುದ್ಧ ಮಾನವ ಚೈತನ್ಯ ಹೋರಾಟ ಮಾಡುತ್ತಲೇ ತನ್ನ ಅಂತರಂಗದ ಪೊರೆಯುವ ಶಕ್ತಿಯನ್ನು ಕಾಪಾಡಿಕೊಂಡಿದೆ. ಕನ್ನಡ ಸಂಸ್ಕೃತಿಯಲ್ಲಿ ಇಂತಹ 'ಮಾರ್ಗ'ದ ವಿರುದ್ಧ 'ದೇಸಿ' ಚೈತನ್ಯ ಹೋರಾಡುತ್ತಲೇ ಬಂದಿರುವುದನ್ನು ನಾವು ಇತಿಹಾಸದ ಉದ್ದಕ್ಕೂ ಕಾಣಬಹುದು.

## KEYWORDS:

ಶಿವಾಪುರ, ಬರಮೇಗೌಡ, ಚೆಂಬಸವ, ನೇರಳೆ ಹಣ್ಣು, ಒಲವು, ಕುಂಟಿರಪ.

**ಶಿವನ ಡಂಗುರ ಕಾದಂಬರಿಯ ವಸ್ತು ವಿವೇಚನೆ:**

ಕಾದಂಬರಿ ಕುರಿತು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ 'ಸಮಕಾಲೀನ ಬದುಕಿನ ತಲ್ಲಣಗಳನ್ನು ಹೀಗೆ ಮುಖಾಮುಖಿಯಾಗಿಸಿ ರಚನೆಯಾದ ಮತ್ತೊಂದು ಕೃತಿಯನ್ನು ನಾನು ಕನ್ನಡದಲ್ಲಿ ಮಾತ್ರವಲ್ಲ, ಭಾರತೀಯ ಇತರ ಭಾಷೆಗಳಲ್ಲೂ ಕಂಡಿಲ್ಲ. ಕಂಬಾರರನ್ನು ಓದುವಾಗ ಇಳಂಗೋಅಡಿ, ಅಚಿಬೆ, ಪೋಯೆಂಕಾ, ಮಾರ್ಕೆಸ್ ಮೊದಲಾದವರ ಜೊತೆ ಹೋಲಿಸುವ ಉತ್ಸಾಹ ಮೂಡುತ್ತದೆ. ಆದರೆ ಇವರೆಲ್ಲರಿಗಿಂತ ಭಿನ್ನರಾದ ಕಂಬಾರರಿಗೆ ನಮ್ಮ ಜಾನಪದ ಜಗತ್ತು ಮೂಲ ಪ್ರೇರಣೆ. ಜನಪದರ ಸೃಜನಶೀಲತೆಯ ಬಗ್ಗೆ ಕಂಬಾರರಿಗೆ ಅಪಾರ ವಿಶ್ವಾಸ. ಈ ದೃಷ್ಟಿಯಿಂದ 'ಶಿವನ ಡಂಗುರ' ಒಂದು ವಿಶಿಷ್ಟ ಕೃತಿ, ಮಾತ್ರವಲ್ಲ, ಹೊಸ ದರ್ಶನ ನೀಡುವ ಮಹತ್ವದ ಕಾದಂಬರಿ' ಎಂದು ವಿಶ್ಲೇಷಿಸಿದ್ದಾರೆ.

ಕೃಷ್ಣ ಮನವಳ್ಳಿ ಅವರು 'ಈ ಕಾದಂಬರಿಯ ಕಥನ ವಾಸ್ತವಿಕತೆಯಿಂದ ಮಿಥ್ ಶೈಲಿಗೆ, ಮಿಥ್‌ನಿಂದ ವಾಸ್ತವಿಕತೆಯತ್ತ ಬದಲಾಗುತ್ತಾ ಹೋಗುತ್ತದೆ. ಮತ್ತು ಇತಿಹಾಸದ ನೇರ ನಡೆ, "ಪ್ರಗತಿಶೀಲ ಗಮನ" ಇತ್ಯಾದಿ ಮಾತುಗಾರಿಕೆಯ ಮಾಯೆಯನ್ನು ಅಲ್ಲಗಳೆದು, ನಮ್ಮ ಈ ಮೂರನೇ ಜಗತ್ತಿನ ಸಣ್ಣ ಪುಟ್ಟ ಊರು ಹಳ್ಳಿಗಳಲ್ಲೂ ಹೇಗೆ ಜಾಗತಿಕ ಹಾಗೂ ಹೊಸ-ವಸಾಹತು ಶಾಹಿ ಸಾಮ್ರಾಜ್ಯ ಹರಡುತ್ತಾ ಹೊರಟಿದೆ ಅನ್ನುವ ಕಹಿ ನಿಜವನ್ನು ಎತ್ತಿ ತೋರಿಸುತ್ತದೆ' ಎಂದು ವಿವರಿಸುತ್ತಾರೆ.

ಕಾದಂಬರಿಯ ಕೇಂದ್ರಬಿಂದು ಶಿವಾಪುರ ಗ್ರಾಮ. ಕಂಬಾರರ ಸಮೃದ್ಧ ಸೃಜನಶೀಲತೆಯ ಸಂಕೇತವಾಗಿ ಈ ಗ್ರಾಮ ಮೂಡಿಬಂದಿದೆ. ಅದನ್ನು ಅವರು ಮನಸಾರೆ ಹಾಡುತ್ತಾರೆ. ಶಿವಾಪುರ ಗ್ರಾಮಕ್ಕೆ ಆರಂಭದಲ್ಲಿ ಚರಿತ್ರೆ ಇಲ್ಲದೆ ಸ್ಥಳಪುರಾಣಗಳಿದ್ದವು. ಒಂದು ಜೋಗ್ತಿಯರ ಹಾಡಿನಲ್ಲಿ; ಇನ್ನೊಂದು ಕುರುಬರ ಹಾಡಿನಲ್ಲಿ. ವಸಾಹತುಶಾಹಿ ಬ್ರಿಟೀಷರ ಆಳ್ವಿಕೆಯಲ್ಲಿ ಈ ಊರು ಚರಿತ್ರೆಯಲ್ಲಿ ದಾಖಲಾಯಿತು. ಈಗಿನ ಘೋಡಗೇರಿಯ ಪಶ್ಚಿಮದಲ್ಲಿ ಸುಮಾರು ಒಂದು ಮೈಲು ದೂರದಲ್ಲಿ ಹಿರಣ್ಯಕೇಶಿ ಮತ್ತು ಘಟಪ್ರಭಾ ನದಿಗಳು ಕೂಡುವ ಕೂಡಲ ಸಂಗಮದಲ್ಲಿ ಇರುವ ಊರೇ ಶಿವಾಪುರ. ಕಂಬಾರರ ಪೂರ್ವಜರಿದ್ದಿದ್ದು ಕೂಡಾ ಇದೇ ಊರಿನಲ್ಲಿ. ಈ ಶಿವಾಪುರದ ಶೋಧನೆಯೆ ಕಂಬಾರರ ಈ 'ಶಿವನ ಡಂಗುರ' ಕಾದಂಬರಿಯ ದ್ರವ್ಯ. ಹೀಗಾಗಿಯೇ ಕಂಬಾರರ ಸೃಜನಶೀಲತೆಯಲ್ಲಿ ಪುರಾಣ, ಚರಿತ್ರೆ ಹಾಗೂ ಕನಸು ಒಂದು ಹದದಲ್ಲಿ ಸೇರಿಕೊಂಡು ಕೃತಿಯನ್ನು ವಿಶಿಷ್ಟವಾಗಿಸಿದೆ.

ಪ್ರಕೃತಿಯ ಸಹಜ ಸೌಂದರ್ಯದೊಂದಿಗೆ ಕೃಷಿ, ಪಶುಸಂಗೋಪನೆ, ಕುಶಲ ಕೈಗಾರಿಕೆಯ ಸ್ವಾವಲಂಬಿ ಬದುಕನ್ನು ಜೀವಿಸುತ್ತಿದ್ದ ಶಿವಾಪುರ ಗ್ರಾಮಕ್ಕೆ ಆಧುನಿಕತೆಯ ಮಹಾಮಾರಿಯಾದ ನಗರ ಸಂಸ್ಕೃತಿಯ ರಾಕ್ಷಸನ ಪ್ರವೇಶವಾಗುತ್ತದೆ. ಆ ರಾಕ್ಷಸ ಊರ ಗೌಡನಾದ ಬರಮೇಗೌಡನನ್ನು ಕೊಂದು ಆತನ ವೇಷ ತೊಟ್ಟು ಊರಿನ

ಚಹರೆಯನ್ನು ಬದಲಾಯಿಸಿಬಿಡುತ್ತದೆ. ಕಾದಂಬರಿಯಲ್ಲಿ ಶಿವಾಪುರ ಅನ್ಯಾಕ್ರಮಣಕ್ಕೊಳಗಾದ ಭಾರತೀಯ ಸಮಾಜದ ಚಿತ್ರಣವಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಲಕ್ಷಣಗಳಾದ ಭೋಗ ಸಂಸ್ಕೃತಿ, ಸ್ವಾರ್ಥ ಶೋಷಣೆಗಳಿಂದ ನಲುಗಿದ ಸಮಾಜ ವ್ಯವಸ್ಥೆ, ಬಲಿಷ್ಠ ಹಾಗೂ ಕೇಂದ್ರೀಕೃತ ಪ್ರಭುತ್ವ, ಅಭಿವೃದ್ಧಿಗಾಗಿ ಪ್ರಕೃತಿಯ ವಿನಾಶ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಅತಿರೇಖ, ನಗರ ಸಂಸ್ಕೃತಿಯು ಇವೆಲ್ಲಾ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡು ವಿಕಾರಗೊಳ್ಳುತ್ತಿದೆ. ಇದರ ಹುಚ್ಚುಹೊಳೆಗೆ ಸಿಕ್ಕಿ ಈಗ ನಾವು ತತ್ತರಿಸುತ್ತಿದ್ದೇವೆ. ಈ ದುರಂತವನ್ನು 'ಶಿವನ ಡಂಗುರ' ಚಿತ್ರಿಸುತ್ತದೆ.

ಒಂದು ಕಾಲದ ಶಿವಾಪುರದ ಬದುಕಿನಲ್ಲಿ ಭೂಮಿ ಜನಗಳ ತಾಯಿಯಾಗಿ ಪೊರೆಯುತ್ತಿದ್ದಳು. ಆ ಊರಿನಲ್ಲಿ ಎಂತಹ ಅಪಾಯದ ಪರಿಸ್ಥಿತಿಯಲ್ಲೂ ರಕ್ಷಿಸುವ ಜೀವನ ಮೌಲ್ಯಗಳಿದ್ದವು. ಆ ಮೌಲ್ಯಗಳನ್ನು ಉಳಿಸಿಕೊಳ್ಳುವ ಜನರಿದ್ದರು. ಆದರೆ ಇದೇ ಶಿವಾಪುರ ಆಧುನಿಕತೆ ಎಂಬ ಮಾಯಾಜಾಲಕ್ಕೆ ಸಿಲುಕಿ ಲಯತಪ್ಪಿದೆ. ಲಯ ಕಳೆದುಕೊಂಡ ಶಿವಾಪುರವನ್ನು ಮರಳಿ ಸರಿದಾರಿಗೆ ತರುವ ಪ್ರಯತ್ನವನ್ನು 'ಶಿವನ ಡಂಗುರ' ಕಾದಂಬರಿಯಲ್ಲಿ ಕಂಬಾರರು ಸಶಕ್ತವಾಗಿ ಮಾಡಿದ್ದಾರೆ.

ಶಿವಾಪುರದ ಕೇಂದ್ರ ವ್ಯಕ್ತಿಯೇ ಬರಮೇಗೌಡ. ಗೌಡಾಳಿಕೆಯ ಮನೆತನದಲ್ಲಿ ಹುಟ್ಟಿದ್ದ ಬರಮೇಗೌಡ ಊರಿನ ಎಲ್ಲಾ ಚಟುವಟಿಕೆಗಳಲ್ಲೂ ಈತನ ಪಾತ್ರವಿತ್ತು. ಒಳಿತು ಕೆಡುಕುಗಳು ಏನೇ ಬಂದರೂ, ಶಿವಾಪುರದ ಗ್ರಾಮಸ್ಥರು ಈತನ ಸಲಹೆ ಸೂಚನೆಗಳನ್ನು ಪಡೆಯದೆ ಮುಂದುವರೆಯುವಂತಿರಲಿಲ್ಲ. ಬರಮೇಗೌಡ ತನ್ನ ವಿಲಾಸಿ ಜೀವನ ಹಾಗೂ ಒಳ್ಳೆಯ ಗುಣಗಳಿಂದಲೂ, ಕಾರ್ಯಗಳಿಂದಲೂ ಹೆಸರು ಮಾಡಿದ್ದ, ಅನೇಕ ಹೆಂಗಸರನ್ನು ಆಕರ್ಷಿಸಿ ಅವರ ಗಂಡಂದಿರ ಶಾಪಕ್ಕೆ ಗುರಿಯಾಗಿದ್ದ. ಪಾರೋತಿ ಎಂಬ ಸಹಧರ್ಮಿಣಿ ಇದ್ದರೂ ಜೋಗತಿ ತುಂಗವ್ವನನ್ನು ಹೆಂಡತಿಯನ್ನಾಗಿ ಮಾಡಿಕೊಂಡಿದ್ದ. ಅವಳಿಂದ ಜನಿಸಿದ ಲಸಮ ತನ್ನ ಉತ್ತರಾಧಿಕಾರಿ ಅಲ್ಲದಿದ್ದರೂ ಮಗನೆಂದು ಒಪ್ಪಿಕೊಂಡಿದ್ದ. ಚಂಬಸವ – ಶಾರಿಯರ ಸಂಬಂಧವನ್ನು ಸ್ವೀಕರಿಸಿದ್ದ. ಶಿವಾಪುರಕ್ಕಾಗಿ ತುಡಿಯುತ್ತಿದ್ದ, ಶಿವಾಪುರವನ್ನು ಪ್ರೀತಿಸುತ್ತಿದ್ದ. ದಿಟ್ಟತನದಿಂದ ತನ್ನ ಬಹಿರಂಗದ ಜೀವನವನ್ನು ರೂಢಿಸಿಕೊಂಡಿದ್ದ. ಬೀಜವಿಲ್ಲದ ಬೆಳೆಗಳನ್ನು ತಂದು ರೈತರಿಗೆ ಒಂದಿಷ್ಟು ಹಣ ಬರುವ ಹಾಗೆ, ದುಡ್ಡಿನ ಮಹತ್ವ ತಿಳಿಯುವ ಹಾಗೆ ಮಾಡಿದ್ದ. ಹಾಗೆ ನೋಡಿದರೆ ಶಿವಾಪುರದಲ್ಲಿ ಇಂಗ್ಲಿಷ್ ಶಾಲೆ, ಆಸ್ಪತ್ರೆಗಳನ್ನು ಆರಂಭಿಸಬೇಕೆಂದು ಬರಮೇಗೌಡ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದ. ಅವನ ಕೋರಿಕೆ ಮನ್ನಿಸಿ, ಜಿಲ್ಲಾಧಿಕಾರಿ ಅಮೆರಿಕದ ಚಾರಿಟಿ ಸಂಸ್ಥೆಯಿಂದ ನೆರವು ಕೊಡಿಸುವುದಾಗಿ ಹೇಳಿದರು. ಸ್ಥಳ ಪರಿಶೀಲಿಸಿ 'ಮಲ್ಲೀಮಡು'ವನ್ನು ಆಯ್ಕೆ ಮಾಡಿದರು. ಅಮೆರಿಕದ ಜಾಕ್ಸನ್ ಕಂಪೆನಿಯ ಜೊತೆ ಒಪ್ಪಂದವೂ ಆಯಿತು.

ಯೋಜನೆಯನ್ನು ಕಾರ್ಯರೂಪಕ್ಕೆ ತರಲು 'ಮಲ್ಲೀಮಡು'ವನ್ನು ಸಮತಟ್ಟು ಮಾಡುವ ಕೆಲಸ ಆರಂಭವಾಯಿತು. ಆದರೆ ಸಮತಟ್ಟು ಮಾಡಲು ತುಂಬುತ್ತಿದ್ದುದು ಕಲ್ಲುಮಣ್ಣಲ್ಲ, ವಿದೇಶಿ ಫ್ಯಾಕ್ಟರಿಯ ರಸಾಯನ ತ್ಯಾಜ್ಯವನ್ನು. ಅಂದರೆ ವಿಷವನ್ನು. ಬರಮೇಗೌಡನ ಊರನ್ನು ಉದ್ಧಾರ ಮಾಡುವ ಯೋಜನೆ ಹೀಗೆ ಊರನ್ನು ಸ್ಮಶಾನ ಮಾಡುವ ಯೋಜನೆಯಾಗಿ ರೂಪಾಂತರವಾಯಿತು. ಅವನ ಸದುದ್ದೇಶದ ಹಂಬಲ ಹೊರಗಿನ ಶಕ್ತಿಗಳ ಕುಯುಕ್ತಿಯಿಂದಾಗಿ ಶಿವಾಪುರದಲ್ಲಿ ಅಪಾಯಕಾರೀ ರೋಗಗಳಿಗೂ, ನೆಲದ ಬಂಜರುತನಕ್ಕೂ ಕಾರಣವಾಗಿತ್ತು. ಶಿವಾಪುರದ ತುಂಬ ಗಬ್ಬುವಾಸನೆ, ರುಚಿ ಕಳೆದುಕೊಂಡ ಹಣ್ಣುಗಳು, ವಿಕಾರ ರೂಪದ ಕರುಗಳು, ಶಿಶುಗಳ ಜನನ – ಇವೆಲ್ಲ ಇದರ ದುಷ್ಪರಿಣಾಮಗಳು.

ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವ ಹಳ್ಳಿಗಳ ವಿನಾಶದ ಕಥೆಯಿದು. ಸಮಕಾಲೀನ ಬದುಕಿನ ತಲ್ಲಣವಿದು. ಇದನ್ನು ಅರ್ಥಮಾಡಿಕೊಳ್ಳಲು ಸಮಾಜಶಾಸ್ತ್ರಜ್ಞರ, ಅರ್ಥಶಾಸ್ತ್ರಜ್ಞರ ಅಗತ್ಯವಿಲ್ಲ. ತುಂಗಮ್ಮನಂತಹ ಅನಕ್ಷರಸ್ಥ ಜೋಗಿತಿ ಹೆಣ್ಣುಮಗಳಿಗೂ ಇದು ತಿಳಿಯುತ್ತದೆ. ಅವಳು ನಮಶ್ಶಿವಾಯನಿಗೆ ಹೇಳುವ ಈ ಮಾತುಗಳು ಗಮನಾರ್ಹವಾಗಿದೆ:

'ನೀನಾದರೂ ಬುದ್ಧಿ ಹೇಳಬಾರದಾ ನನ್ನಪ್ಪಾ ಈ ಬುದ್ಧಿಗೇಡಿ ಹೈವಾನರಿಗೆ? ಇವಕ್ಕೆಲ್ಲಾ ರೊಕ್ಕದ ಹಪಾಪಿ ಹತ್ತೇತಿ. ರೊಕ್ಕದ ಬೆಳೆ ಅಂತ ಮಳೀ ನೀರು ಹೊಳೀ ನೀರು ಸಾಲವಲ್ಲ! ರಸಗೊಬ್ಬರ ಸಾಲವಲ್ಲ! ಸಾಲ ತಂದು ತಂದು ಹೊಲದಾಗ ಸುರುವಾಕ ಹತ್ಯಾರು. ಕುಡಿದೇವಂದರ ನಮ್ಮ ಊರ ಹೊಳೀ ನೀರ ನಮಗ ಇಲ್ಲ. ಬೆಳೆದ ಬೆಳೀ ನಮ್ಮದಲ್ಲ! ಇವರು ಬೆಳೆದ ಬೆಳಿಗೆ ಯಾರೋ ದರಾ ಕಟ್ಟವರಂತ, ಯಾರೋ ಕೊಳ್ಳವರಂತ! ಅವರು ಕೊಟ್ಟಷ್ಟ ತಗೊಂಡ ಮನೀಗಿ ಸಪ್ಪ ಮೋತಿ ಹಾಕ್ಕೊಂಡ ಬರತಾವು! ಇವೆಂಥಾ ರೈತರೊ ಎಪ್ಪಾ? ಯಾಕೋ ಏನೋ ಮಲ್ಲೀಮಡು ಹೊಲಸ ನಾರತೈತಿ, ಯಾಕಂತ ನೋಡೋ ಮಕ್ಕಳಾ ಅಂದರ ಮಿಗ ಸತ್ತಿರಬೇಕ ಬಿಡಬೇ ಅಂತಾರು! ಮಿಗದ ಹೆಣಾ ಹೆಂಗ ನಾರತೈತಿ, ವಿಷ ಹೆಂಗ ನಾರತೈತಿ ಅಟೂ ತಿಳಿಯಾಣಿಲ್ಲೇನೋ ನನ್ನಪ್ಪಾ? ನಿನ್ನ ಮಠದಾಗ ಕೂಡ್ರಿಸಿಕೊಂಡ ಒಂದೀಟ ಬುದ್ಧಿ ಹೇಳಬಾರದಾ?'

ಇದು ಸ್ಥಳೀಯ ವಿವೇಕ. ದೇಸಿಯ ಅಂತಃಸತ್ವ, ದುಡ್ಡಿನ ಬೆನ್ನಹತ್ತಿ ರೈತರು ತಮಗೆ ಅಗತ್ಯವಿದ್ದ ಬೆಳೆಗಳನ್ನು ನಿರ್ಲಕ್ಷಿಸಿದ್ದರು. ರೈತರು ತಾವು ಬೆಳೆದ ಧಾನ್ಯವನ್ನಾಗಲೀ ತರಕಾರಿಯನ್ನಾಗಲೀ ರಸಗೊಬ್ಬರದ ವಾಸನೆಯಿದೆಯೆಂದು ತಾವೇ ತಿನ್ನುತ್ತಿರಲಿಲ್ಲ. ಚೆನ್ನಾಗಿಲ್ಲವೆಂದು ತಾವೇ ನಂಬಿದ್ದನ್ನು ಬೇರೆಯವರಿಗೆ ಮಾರಬಾರದೆಂಬ ವಿವೇಕವೂ ಅವರಲ್ಲಿ ಉಳಿದಿರಲಿಲ್ಲ. ಎಲ್ಲವೂ ಎಲ್ಲದರ

ಉದ್ದೇಶವೂ ಗುರಿದಾರಿಗಳೆಲ್ಲವೂ ದುಡ್ಡು ಮಾಡುವುದಾಗಿತ್ತು. ಊರಿನ ಗತಿ ಭಯಪಡಬೇಕಾದ ಈ ಸ್ಥಿತಿಗೆ ಬಂತೆನ್ನುವುದು ತುಂಗವ್ವನ ಕಾಳಜಿಯಾಗಿತ್ತು. ತುಂಗವ್ವನ ಮಾತಿನಲ್ಲಿರುವ ಮತ್ತೊಂದು ಅರ್ಥಶಾಸ್ತ್ರದ ಸೂಕ್ಷ್ಮವೂ ಇಲ್ಲಿ ಗಮನಿಸಬೇಕಾದಂಥದು. ರೈತರ ದುಡಿಮೆಯ ಶ್ರಮಕ್ಕೆ ಬೆಲೆ ಕಟ್ಟುವವರು ಹೊರಗಿನವರು. ಇದು ಆಧುನಿಕ ಅರ್ಥವ್ಯವಸ್ಥೆಯ ಸ್ವರೂಪ. ಶಿಕ್ಷಣ ಪಡೆದ ವಿದ್ಯಾವಂತರ ದುಡಿಮೆಯನ್ನು ಮಾನದಂಡವಾಗಿಟ್ಟುಕೊಂಡು ಇವತ್ತು ಶ್ರಮದ ಬೆಲೆ ನಿರ್ಧಾರವಾಗುತ್ತಿದೆ. ವಿದ್ಯಾವಂತರ ಒಂದು ದಿನದ ದುಡಿಮೆಯ ಬೆಲೆ ರೈತರ ಒಂದು ತಿಂಗಳ ದುಡಿಮೆಗೂ ಕೆಲವೊಮ್ಮೆ ಸಮನಾಗದು. ಇದು ಯಾವ ಬಗೆಯ ಲೆಕ್ಕಾಚಾರ? ಇದರ ಹಿಂದಿರುವ ತರ್ಕ ಯಾವುದು? ಶ್ರಮದ ಬೆಲೆಯ ಮಾನದಂಡವನ್ನು ನಿರ್ಧರಿಸುತ್ತಿರುವವರು ವಿದ್ಯಾವಂತರು. ಇಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಮೂಲ ಕಾರಣ ಇಲ್ಲಿದೆ. ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕುತ್ತಿಲ್ಲ. ತುಂಗವ್ವನ ವಿವೇಕ ನಮ್ಮನ್ನು ಆಳುವವರಿಗೇಕಿಲ್ಲ? ಶಿವಾಪುರದ ಈ ಸ್ಥಿತಿಗೆ ಕಾರಣವಾಗಿರುವ ಸಂಗತಿಗಳಾವುವು? ಪರಿಹಾರವಿದೆಯೇ? ಇಂಥ ಪ್ರಶ್ನೆಗಳು 'ಶಿವನ ಡಂಗುರ' ಕಾದಂಬರಿಯ ವಿನ್ಯಾಸವನ್ನು ರೂಪಿಸಿವೆ.

ಶಿವಾಪುರದ ಈ ಸ್ಥಿತಿಗೆ ಮುಖ್ಯ ಕಾರಣ ಅಲ್ಲಿಗೆ ಹೊರಗಿನಿಂದ ಬಂದ ಕುಂಟಿರಪ. ಅವನಿಗೂ ಶಿವಾಪುರದ ನೆಲಕ್ಕೂ ಅರ್ಥಪೂರ್ಣ ಸಂಬಂಧವಿಲ್ಲ. ಕಾನೂನು ಪದವೀಧರನಾದ ಇವನು ವೈದ್ಯನೆಂದು ಹೇಳಿಕೊಳ್ಳುತ್ತಿದ್ದ. ಅಲ್ಲಿಯೂ ಇವನು ವೀರ್ಯವೃದ್ಧಿಯ ಲೇಹ್ಯ ಮಾರಿ ಬದುಕು ಸಾಗಿಸುತ್ತಿದ್ದ. ವೈದ್ಯವೃತ್ತಿಯ ಹೆಸರಿನಲ್ಲಿ ಇವನು ಜನರ ದೌರ್ಬಲ್ಯ ಬಳಸಿಕೊಂಡು ಮಾಡುತ್ತಿದ್ದುದು ವ್ಯಾಪಾರ. ಶಿವಾಪುರಕ್ಕೆ ಬಂದ ಇವನು ಬರಮೇಗೌಡನ ವಿಲಾಸೀ ಪ್ರವೃತ್ತಿಯ ದೌರ್ಬಲ್ಯ ಬಳಸಿಕೊಂಡು ಅವನನ್ನು ವಶಪಡಿಸಿಕೊಳ್ಳುತ್ತಾನೆ. ಅವನ ಮೂಲಕವೇ ಶಿವಾಪುರದ ಗಾಳಿಯಲ್ಲಿ ವಿಷ ಬೆರಸುತ್ತಾನೆ. ತಾರ, ಬಿಗ್‌ಬಾಸ್, ಜಾಕ್ಸನ್ ಕಂಪೆನಿ ಎಲ್ಲವೂ ಶಿವಾಪುರದ ಬದುಕಿನಲ್ಲಿ ಪ್ರವೇಶಿಸುವುದು ಈತನ ಮೂಲಕವೇ. ಇವರು ಯಾರೂ ಈ ನೆಲಕ್ಕೆ ಸಂಬಂಧಿಸಿದವರಲ್ಲ. ಶಿವಾಪುರದ ಸಮಗ್ರ ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲಿಯ ಜನರ ಬದುಕನ್ನು ನರಕವಾಗಿಸುತ್ತಾರೆ. ಗೌಡ ಜೋಗಿತಿಯನ್ನು ಬೇಡಿ ಪಡೆಯುತ್ತಾನೆ. ಅವಳಿಗೆ ಬದುಕಿನಲ್ಲಿ ಮಹತ್ವದ ಸ್ಥಾನ ನೀಡುತ್ತಾನೆ. ಹೆಂಡತಿಯೆಂಬಂತೆ ಕಾಣುತ್ತಾನೆ. ಆದರೆ ಕುಂಟಿರಪ ಹೆಂಡತಿಯನ್ನೇ ಸೂಳೆಯಾಗಿಸಲು ಹೊರಡುವಂಥವನು. ರಸಿಕತನ ಲಂಪಟತನವಾಗಿ ರೂಪಾಂತರವಾಗಿಬಿಡುತ್ತದೆ. ರಾಜಕೀಯ ಪ್ರವೇಶವಾಗಿ ಊರು ರಣರಂಗವಾಗುತ್ತದೆ. ಅತ್ಯಾಚಾರವಾಗುತ್ತದೆ, ಕೊಲೆಯಾಗುತ್ತವೆ. ಸಂಚುಗಳು ರೂಪುಗೊಳ್ಳುತ್ತವೆ, ನಂಬಿಕೆ ಕುಸಿಯುತ್ತದೆ. ಹೊರಗಿನ ಶಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಅಭಿವೃದ್ಧಿಯ ಹೆಸರಿನಲ್ಲಿ

ಶಿವಾಪುರದ ಆತ್ಮವನ್ನೇ ನಾಶಮಾಡಿಬಿಡುತ್ತವೆ. ಬ್ರಿಟಿಷರು ಮಾಡಿದ್ದಾದರೂ ಇನ್ನೇನು? ಪಶ್ಚಿಮಕ್ಕೆ ಮಾರಿಕೊಂಡು ರತ್ನಗಂಬಳಿ ಹಾಸುತಿರುವ ನಮ್ಮ ಸರ್ಕಾರಗಳು ಮಾಡುತ್ತಿರುವುದಾದರೂ ಏನನ್ನು? ಕುಂಟಿರಪನದು ವಿಕೃತ ಸಂತಾನ. ಆ ಸಂತಾನವೇ ಇಂದೂ ನಮ್ಮನ್ನು ನಿಯಂತ್ರಿಸುತ್ತಿದೆ.

ತುಂಗವ್ವನಿಗೆ ಒಂದು ಕನಸು ಬೀಳುತ್ತದೆ: 'ಊರಹೊಳಿ, ಅಲ್ಲೊಬ್ಬಳು ಯತ್ನ ಅಲ್ಲಿಗೊಬ್ಬ ಗಂಡ ಜೋಗ್ಯಾ ಬಲ್ತಾನ. ಇವ ಆಕಿಯ ಬಗತ. ಇವನನ್ನ ನೋಡಿ ಆಕೆ ನಕ್ಕಳು. ಅವ ಈಕೆಯ ಕಾಲಿಗೆ ಬಿದ್ದ. ಬೀಳೋದಷ್ಟ ತಡ ಆಕಿ ಅವನನ್ನ ಗಟ್ಟಿಯಾಗಿ ಹಿಡಕೊಂಡು ಕತ್ತಿಗಿ ಬಾಯಿ ಹಾಕಿ ಮೈಯಾಗಿನ ಎಲ್ಲಾ ರಕ್ತ ಹೀರಿಕೊಂಡಳಪ್ಪ! ಇವ ಖಾಲಿಯಾಗಿ ಯಾರ್ಯಾರೋ ತಬ್ಬಿಕೊಂಡು, ತಬ್ಬಿಕೊಂಡವರ ರಕ್ತ ಹೀರತಿದ್ದ, ಅವಳು ಬಂದು ಅವ ಹೀರಿದ ರಕ್ತವನ್ನ ಹೀರಿ ಅವನನ್ನ ಖಾಲಿ ಮಾಡ್ತಿದ್ದು! ಇದು ಹೀಂಗ ನಡೀತಿತ್ತಪ್ಪ!' ನೆಲದ ಸಂಬಂಧವಿಲ್ಲದ ಶಕ್ತಿಗಳು ಇಂಥ 'ಯಕ್ಷಿ'. ಮೋಹಕರೂಪದ ಈ ಯಕ್ಷಿ ಆಕರ್ಷಿಸಿ ರಕ್ತ ಹೀರುವಂಥವಳು. ಶಿವಾಪುರವೇ ಈ ಮೋಹಕಶಕ್ತಿಗೆ ವಶವಾಗಿದೆ. ಗೌಡನ ರಕ್ತವನ್ನು ಅವಳು ಹೀರಿದ್ದಾಳೆ. ತುಂಗವ್ವನನ್ನು ತಲೆ ಕೆಳಗು ಮಾಡಿ ನೀಲಗಿರಿ ಮರಕ್ಕೆ ನೇತುಹಾಕಿದ್ದಾಳೆ. ರಟ್ಟಿಗಿ ತಾಯಿತ ಕಟ್ಟಿದ್ದರಿಂದ ಅವಳು ಉಳಿದಿದ್ದಾಳಷ್ಟೆ. ನಮಶಿವಾಯನ ಮಠದ ಹಣ್ಣುಗಳು ರುಚಿ ಕಳೆದುಕೊಂಡು ರೋಗಿಷ್ಠವಾಗಿವೆ. ಈ ಯಕ್ಷಿಯಿಂದ ತಪ್ಪಿಸಿಕೊಂಡವನು ಚಂಬಸವ ಮಾತ್ರ.

ಚಂಬಸವ ಗೌಡಾಳಿಕೆಯ ಕುಟುಂಬದವನಾದರೂ ಜನಪದ ದೇವತೆಯಂತಿದ್ದ ಜೋಗಿತಿಯ ಎದೆಹಾಲು ಕುಡಿದು ಬೆಳೆದವನು. ಬಿ.ಎ ಕಲಿತಿದ್ದರೂ ಆಧುನಿಕ ಶಿಕ್ಷಣ ಸೃಷ್ಟಿಸಿರುವ ಪರಕೀಯತೆಯಿಂದ ಎಚ್ಚರದಿಂದ ಪಾರಾಗಿ ರೈತಾಪಿ ಜನರ ಜೊತೆ ಬದುಕಲು ಬಯಸಿದವನು. ನಮಶಿವಾಯನ ಆಶೀರ್ವಾದ ಪಡೆದು, ರೂಢಿಯ ಕಟ್ಟುಗಳನ್ನು ಮುರಿದು ಶಾರಿಯನ್ನು ಮದುವೆಯಾದವನು. ಕುಂಟಿರಪ ಬರಮೇಗೌಡನನ್ನು ಮುಂದಿಟ್ಟುಕೊಂಡು ನಡೆಸುತ್ತಿದ್ದ ಎಲ್ಲ ಬಗೆಯ ಜೀವವಿರೋಧಿ ಚಟುವಟಿಕೆಗಳನ್ನೂ ವಿರೋಧಿಸುತ್ತಿದ್ದವನು. ಕಂಬಾರರು ಚಂಬಸವನನ್ನು ಕುಂಟಿರಪನಿಗೆ ಪರ್ಯಾಯ ಎಂಬಂತೆ ಚಿತ್ರಿಸುತ್ತಾರೆ. ಈ ನೆಲದ ಸತ್ವಗಳನ್ನು ಬೇರೆ ಬೇರೆ ನೆಲೆಗಳಿಂದ ಪಡೆದ ಚೈತನ್ಯವಿದು. ಗೌಡ, ತುಂಗವ್ವ, ನಮಶ್ಶಿವಾಯ, ಶಾರಿ, ಅಮ್ಮನಬೆಟ್ಟದ ಅಯ್ಯ-ಎಲ್ಲರ ಸಾತ್ವಿಕ ಶಕ್ತಿಯ ಮೂರ್ತರೂಪ ಚಂಬಸವ. ಈತ ದುಷ್ಟಶಕ್ತಿಗಳನ್ನು ಎದುರಿಸುವ ಶಕ್ತಿ ಪಡೆದವನು.

ಚಂಬಸವ ದುಷ್ಟಶಕ್ತಿಗಳನ್ನು ಕೊಲ್ಲುವ ಚಿತ್ರ ಕಾದಂಬರಿಯಲ್ಲಿ ಅತ್ಯಂತ ಧ್ವನಿಪೂರ್ಣವಾಗಿ ಚಿತ್ರಿತವಾಗಿದೆ. ವಾಸ್ತವವಾಗಿ ಅವನು ಕೊಲ್ಲುವುದು ಇನ್ಸ್‌ಪೆಕ್ಟರ್, ಇಬ್ಬರು ಪೋಲೀಸರು ಹಾಗು ರಾಡಿ ರಮೇಶ್ ಮತ್ತು ಕೇಡಿ ಗಣಪ – ಈ ಐದು

ಜನರನ್ನು, ಆದರೆ ಜೈಲಿನಲ್ಲಿರುವಾಗ ಅವನಿಗೊಂದು ಕನಸು ಬೀಳುತ್ತದೆ. ಅದರಲ್ಲಿ ಆತ ನ್ಯಾಯಾಧೀಶರೆದುರು ಹೇಳುತ್ತಾನೆ: ಆ ದಿನ ಹೆಣಗಳನ್ನು ನದಿಗೆಸೆದು ಸ್ನಾನ ಮಾಡಿ ನೋಡಿಕೊಂಡಾಗ ಕಂಡ ಪ್ರತಿಬಿಂಬ ಕುಂಟಿರಪನದು. ಒಬ್ಬ ಮನುಷ್ಯ ರಾಕ್ಷಸನಾಗಬೇಕೆಂದು ಮನಸ್ಸು ಮಾಡಿದರೆ ಕ್ಷಣಾರ್ಧದಲ್ಲೆ ಆಗಲೂಬಲ್ಲ ಎಂಬುದಕ್ಕೆ ಕುಂಟಿರಪನೇ ಸಾಕ್ಷಿ ಮತ್ತು ಆ ರಾಕ್ಷಸತನದ ಬೆಂಕಿ ಆರಬಾರದೆಂದು ಬೇರೆಯವರಿಗೆ ಆಗಾಗ ಹಿಂಸೆ ಮಾಡಿ ಆ ಹಿಂಸೆಯಿಂದ ರಾಕ್ಷಸತನಕ್ಕೆ ಉರುವಲು ಸೇರಿಸುತ್ತ ಬಂದಿದ್ದ. ಇವನೊಬ್ಬನನ್ನ ಕೊಂದರೆ ಮುಂದ ಶಿವಾಪುರ ಶುದ್ಧವಾಗಿರತೈತಿ ಅಂತ ಕೊಂದೆ. ಆದರೆ ನೀರಾಗ ಮೂಡಿಬಂದಾಗ ಮತ್ತವ ಎದುರು ಬಂದ. 'ಮತ್ತ ಬಂದಿ?'ಅಂತ ಇನ್ನೊಮ್ಮೆ ಕೊಂದೆ. ಹೀಂಗ ಐದ ಸಲ ಬಂದ. ಐದೂ ಸಲ ಕೊಂದೆ. ಈ ಪ್ರಸಂಗ ಏನು ಹೇಳುತ್ತದೆ? ಹಾಗಾದರೆ ಚಂಬಸವ ಕೊಂದದ್ದು ಯಾರನ್ನು? ಚಂಬಸವ ಕೊಂದದ್ದು ಐದು ವ್ಯಕ್ತಿಗಳನ್ನೂ ಅಲ್ಲ, ಕುಂಟಿರಪನನ್ನೂ ಅಲ್ಲ. ಅವನು ಕೊಲ್ಲಬಯಸಿದ್ದು ಕೇಡನ್ನು. ಐದು ಕೇಡುಗಳು ನಮ್ಮೊಳಗಿನ ಐದು ದುಷ್ಟಶಕ್ತಿಗಳ ಸಂಕೇತ – ಕಾಮ, ಕ್ರೋಧ, ಮದ, ಮತ್ಸರ, ಲೋಭ. ಕುಂಟಿರಪ ಹೊರಗಿನ ಕೇಡು. ನಮ್ಮೊಳಗೂ ಕೇಡು ಇರುತ್ತದಲ್ಲವೇ? ಅದು ನಾಶವಾಗದೇ ಹೊಸ ಸಮಾಜ ನಿರ್ಮಾಣ ಕಷ್ಟಸಾಧ್ಯ. ಮುಂದೆ ಚಂಬಸವ ಅಮ್ಮನಗುಡ್ಡದ ಅಯ್ಯನ ಮುಂದೆ ಇದೇ ಪ್ರಸಂಗವನ್ನು ಬೇರೊಂದು ರೀತಿ ನಿರೂಪಿಸುತ್ತಾನೆ. ಅಲ್ಲಿ ಅವನು ನೀರಿನಲ್ಲಿ ಕಂಡದ್ದು ಕುಂಟಿರಪನನ್ನಲ್ಲ, ತನ್ನನ್ನೇ. ಶಿವಲಿಂಗಕ್ಕೆ ಕಲ್ಲೆಸೆದ ಸೇಡಿನ ಕಿಡಿ ಇದ್ದ ಹುಡುಗನ ಚಿತ್ರ ಅದು. ಇಲ್ಲಿ ಆ ಹುಡುಗನನ್ನು ಕೊಲ್ಲುತ್ತಾನೆ. ಈ ಹುಡುಗನೂ ಮತ್ತೆ ಮತ್ತೆ ಐದು ಸಲ ಮೂಡಿಬರುತ್ತಾನೆ. ಐದು ಸಲ ಕೊಲ್ಲುತ್ತಾನೆ. ಇಲ್ಲಿ ಚಂಬಸವ ಕೊಲ್ಲುವುದು ತನ್ನೊಳಗಿನ ಮೃಗೀಯ ಶಕ್ತಿಯನ್ನು, ಸೇಡನ್ನು. ಸೇಡಿನಿಂದ ಹೊಸ ಸಮಾಜ ಕಟ್ಟಲು ಸಾಧ್ಯವಿಲ್ಲ, ಅದೇನಿದ್ದರೂ ಪ್ರೀತಿಯಿಂದ ಮಾತ್ರ ಸಾಧ್ಯ. ಇಲ್ಲಿ ಐದು ಎಂಬ ಸಂಖ್ಯೆಯೂ ಅರ್ಥಪೂರ್ಣವಾಗಿಬಿಡುತ್ತದೆ.

ಕಾದಂಬರಿ ಹೀಗೆ ಹೊರಗಿನ ಕೇಡು, ಒಳಗಿನ ಸೇಡು – ಎರಡನ್ನೂ ಏಕಕಾಲಕ್ಕೆ ಎದುರಿಸಿ ಹೊಸ ಸಮಾಜದ ಕಡೆಗೆ ತುಡಿಯುತ್ತದೆ. ಈ ಹೊಸ ಸಮಾಜದ ಪರಿಕಲ್ಪನೆ ಯಾದರೂ ಎಂಥದು?

ಭಾಗೀರ್ತಿ– ಕುಂಟಿರಪನ ವಿಕೃತ ಸಂತಾನ 'ಮಾದೇವಿ' ನಮಶ್ಶಿವಾಯನ ಕರುಣೆಯಿಂದ, ಮಾಣಿಕ್ಯಮ್ಮನ ಆಸರೆಯಲ್ಲಿ ಶಾರವ್ವನ ಮಡಿಲಿನಲ್ಲಿ ಬೆಳೆಯುತ್ತಾಳೆ.

ನಮಶ್ಶಿವಾಯ ಮತ್ತು ಮಾಣಿಕ್ಯಮ್ಮ ಗಾಂಧಿ ಚಳುವಳಿಯಲ್ಲಿ ಪಾಲ್ಗೊಂಡವರು. ಮಾಣಿಕ್ಯಮ್ಮ 'ಕಸ್ತೂರಬಾ ಅನಾಥಾಶ್ರಮ' ನಡೆಸುತ್ತಿದ್ದಾಳೆ. ಆ ಆಶ್ರಮದಲ್ಲಿ ಮಾದೇವಿ ಶಾರವ್ವನ ಆರೈಕೆಯಲ್ಲಿ ಆರೋಗ್ಯಕರವಾಗಿ ಬೆಳೆಯುತ್ತಾಳೆ. ಒಮ್ಮೆ ನಾಲ್ಕು ಜಿಲ್ಲೆಗಳ

ಅಂಗವಿಕಲ ಮಕ್ಕಳಿಗಾಗಿ ಓಟದ ಸ್ಪರ್ಧೆ ಇರುತ್ತದೆ. ಅದರಲ್ಲಿ ಮಾದೇವಿಯೂ ಪಾಲ್ಗೊಳ್ಳುತ್ತಾಳೆ. ಓಟ ಆರಂಭವಾದಾಗ ಮಾದೇವಿ ಸ್ಪರ್ಧೆಯಲ್ಲಿ ಎಲ್ಲರಿಗಿಂತ ಮುಂದಿರುತ್ತಾಳೆ. ಇನ್ನೇನು ಗುರಿ ಮುಟ್ಟಿ ಗೆಲ್ಲಬೇಕು. ಅಷ್ಟರಲ್ಲಿ ಎಲ್ಲರಿಗಿಂತ ಕೊನೆಯಲ್ಲಿ ಕಾಲೆಳೆದುಕೊಂಡು ಬರುತ್ತಿದ್ದ ಮಗು ಕಿಟಾರನೆ ಕಿರುಚಿ ಬಿದ್ದು ಒದ್ದಾಡುತ್ತದೆ. ತಕ್ಷಣ ಮಾದೇವಿ ಗುರಿಯ ಕಡೆ ಓಡುವುದನ್ನು ನಿಲ್ಲಿಸಿ ಹಿಂದೆ ಬಿದ್ದ ಮಗುವಿನ ಕಡೆಗೆ ಓಡತೊಡಗುತ್ತಾಳೆ. ಮಗುವಿನ ಬಳಿ ಹೋಗಿ ಉಪಚರಿಸಿ ಕೈಹಿಡಿದೆತ್ತಿ ಅದರೊಡನೆ ಮೆಲ್ಲಗೆ ಹೆಜ್ಜೆಯಿಡತೊಡಗುತ್ತಾಳೆ. ಮುಂದೆ ಓಡುತ್ತಿದ್ದ ಸ್ಪರ್ಧಿಗಳೂ ಈಗ ಹಿಂದೆ ಬಂದು ಅವರ ಜೊತೆ ಸೇರುತ್ತಾರೆ. ಈಗ ಎಲ್ಲರೂ ನೊಂದ ಮಗುವಿನ ಜೊತೆ ನಿಧಾನ ಹೆಜ್ಜೆ ಹಾಕಿ ಏಕಕಾಲಕ್ಕೆ ಎಲ್ಲರೂ ಗುರಿ ತಲುಪಿ ಎಲ್ಲರೂ ಪ್ರಥಮ ಬಹುಮಾನ ಪಡೆಯುತ್ತಾರೆ.

ಇದು ಕಂಬಾರರು ಕಟ್ಟಿಕೊಡಲೆತ್ನಿಸುವ ಕನಸಿನ ಸಮಾಜ. ಒಬ್ಬರನ್ನೊಬ್ಬರು ತುಳಿದು ಹಿಂದಿಕ್ಕಿ ಮುನ್ನುಗ್ಗುವ ಈ ಸ್ಪರ್ಧಾಜಗತ್ತಿನಲ್ಲಿ ಹೀಗೆ ಎಲ್ಲರೂ ಒಟ್ಟಿಗೇ ಬೆಳೆಯುವ ಪರಿಕಲ್ಪನೆಯೇ ಸೊಗಸಾಗಿದೆ. ದಿನಕ್ಕೊಂದು ಗಂಟೆ ಕೆಲಸ ಮಾಡಿ ಎಲ್ಲ ಸವಲತ್ತುಗಳ ಜೊತೆ ತಿಂಗಳಿಗೆ ಲಕ್ಷಾಂತರ ಸಂಬಳ ಪಡೆಯುವ ಅಧಿಕಾರ ವರ್ಗ ಒಂದು ಕಡೆ, ದಿನವಿಡೀ ಕುಟುಂಬವೆಲ್ಲ ದುಡಿದರೂ ವರ್ಷಕ್ಕೆ ಲಕ್ಷ ಕಾಣದ ರೈತಾಪಿ ಜನರ ಬದುಕು ಮತ್ತೊಂದು ಕಡೆ. ಇದೆಂಥ ಸಮಾಜದ ಪರಿಕಲ್ಪನೆ?

ಚಂಬಸವ – ಶಾರವ್ವ ಮಾದೇವಿಯೊಡಗೂಡಿ ಮರಳಿ ಶಿವಾಪುರಕ್ಕೆ ಬಂದಾಗ ತುಂಗವ್ವ ಹೇಳುತ್ತಾಳೆ: 'ಹೊಲದಲ್ಲಿದ್ದ ಯಕ್ಷಿ ಈಗ ಮಾದೇವಿಯನ್ನು ಕಂಡು ಓಡಿಹೋಯ್ತು'.

ಮಾದೇವಿಯನ್ನು ಮುಂದಿಟ್ಟುಕೊಂಡು ನಾವೀಗ ಹೊಸ ಶಿವಾಪುರ ಕಟ್ಟಬೇಕಾಗಿದೆ. ಇದೇ 'ಶಿವನ ಡಂಗುರ'.

ಕನಕಪುರಿಯ ಕನಸಿನ ಬೆನ್ನುಹತ್ತಿ ಹೊರಟಿರುವ ಆಧುನಿಕ ಸಮಾಜಕ್ಕೆ ಪರ್ಯಾಯವೆಂಬಂತೆ ಕಂಬಾರರು ಹೊಸ ಶಿವಾಪುರದ ಪರಿಕಲ್ಪನೆಯನ್ನು ಇಲ್ಲಿ ನೀಡುತ್ತಾರೆ.

ಕನಕಪುರಿ ಧಾನ್ಯವನ್ನು ಚಿನ್ನ ಮಾಡುವ, ಹುಲ್ಲಿನ ದಳಗಳನ್ನು ಸೈನಿಕರಾಗಿ ರೂಪಾಂತರಿಸುವ, ಒಬ್ಬರನ್ನೊಬ್ಬರು ಬೇಟೆಯಾಡುವ ಸ್ಪರ್ಧಾಜಗತ್ತು. ಕುಶಲ ಕಲೆಗಾರಿಕೆಗೆ ಪ್ರಸಿದ್ಧವಾದ ಅದು ಮಾರಕ ಆಯುಧಗಳ ತಯಾರಿಕೆಗೆ ಹೆಸರುವಾಸಿ. ಈ ನಗರದ ನಿರ್ವಹಣೆ ವರ್ತಕರದ್ದು. ಯುದ್ಧ ನಡೆಯದೆ ವ್ಯಾಪಾರವಿಲ್ಲ, ಲಾಭವಿಲ್ಲ. ಹೀಗಾಗಿ ಸದಾ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ಯುದ್ಧ ನಡೆಯುವಂತೆ ನೋಡಿಕೊಳ್ಳಲಾಗುತ್ತಿತ್ತು. ಇಂಥ ಕನಕಪುರಿಯಲ್ಲಿ ನೆಮ್ಮದಿ ಸಾಧ್ಯವೇ? ಕಂಬಾರರಿಗೆ

ಕನಕಪುರಿಯ ಶಕ್ತಿ ಮಿತಿಗಳ ಅರಿವಿದೆ. ನಮ್ಮ ಹಳ್ಳಿಗಳು ಸ್ಮಾರ್ಟ್ ಸಿಟಿಗಳಾಗಿ ಕನಕಪುರಿಗಳಾಗಬೇಕೆ?

ಪೊರೆಯುವ ಮಾತೃಸಂಸ್ಕೃತಿಯ ಹಾಲುಂಡ, ನಿರ್ವ್ಯಾಜ ಪ್ರೀತಿಯ ನಮಶ್ಶಿವಾಯನ ನೆರವಿನಿಂದ ಅಮ್ಮನಗುಡ್ಡದ ಅಯ್ಯನ ಲೋಕೋತ್ತರ ಕರುಣೆ ಪಡೆದ, ಗಾಂಧಿಯ ಪ್ರಭಾವಕ್ಕೊಳಗಾಗಿ ಎಲ್ಲ ಮಕ್ಕಳ ತಾಯಿಯಾಗಿ ಅನಾಥಾಶ್ರಮ ನಡೆಸುತ್ತಿರುವ ಮಾಣಿಕ್ಯಮ್ಮನ ಆಸರೆಯಲ್ಲಿ ಬೆಳೆದ, ಹೃದಯವಂತಿಕೆಯ ಶಾರವ್ವ–ಸೇಡನ್ನು ಕಳೆದುಕೊಂಡ ಚಂಬಸವ ಇವರ ಮಗಳಾಗಿ ಹೊಸಹುಟ್ಟು ಪಡೆದ ಮಾದೇವಿ ಮಲಿನಗೊಂಡ ಮಲ್ಲೀಮಡುವನ್ನು ತಿಳಿಗೊಳಿಸಬಲ್ಲಳು; ಶಿವಾಪುರದ ಹಣ್ಣುಗಳಿಗೆ ಮತ್ತೆ ರುಚಿ ತಂದು ಕೊಡಬಲ್ಲಳು; ಬಂಜರುಗೊಂಡ ನೆಲವನ್ನು, ಬದುಕನ್ನು ಸಮೃದ್ಧಗೊಳಿಸಬಲ್ಲಳು. ಈ ಅರಿವು ಇಂದಿನ ಅಗತ್ಯ.

ಹಳ್ಳಿಯೊಂದರ ಬದುಕನ್ನು ಚಿತ್ರಿಸುತ್ತ ಜಾಗತೀಕರಣದ ಅಪಾಯ, ನಗರಕೇಂದ್ರಿತ ಪ್ರಗತಿಯ ಪರಿಕಲ್ಪನೆ, ಜನಪದರ ಆತ್ಮನಾಶ, ಅನ್ಯಾಕ್ರಮಣ ನಮ್ಮ ಸೃಜನಶೀಲತೆಯನ್ನೇ ಕೊಲ್ಲುತ್ತಿರುವ ದುರಂತ, ಅಭಿವೃದ್ಧಿಯ ಹೆಸರಿನಲ್ಲಿ ಈ ನೆಲದ ಅಂತಃಸತ್ವವನ್ನೇ ಹೀರುತ್ತಿರುವ ಆಮದು ಯೋಜನೆಗಳ ದುಷ್ಪರಿಣಾಮ – ಹೀಗೆ ಅನೇಕ ಸಂಗತಿಗಳನ್ನು 'ಶಿವನ ಡಂಗುರ' ಚರ್ಚಿಸುತ್ತದೆ.

**ಉಪ ಸಂಹಾರ:**

ನಗರ ಸಂಸ್ಕೃತಿಯ ಅಸ್ಥಿರ ಬದುಕು ಸೃಷ್ಟಿಸುವ ಅನಾಹುತಗಳನ್ನು ಕಾದಂಬರಿ ಅತ್ಯಂತ ಧ್ವನಿಪೂರ್ಣವಾಗಿ ಚಿತ್ರಿಸಿದೆ. ಗ್ರಾಮ ಸಂಸ್ಕೃತಿಯ ಸಶಕ್ತತೆಯನ್ನು ಪರಿಣಾಮಕಾರಿಯಾಗಿ ವ್ಯಕ್ತಗೊಳಿಸಿದೆ 'ಶಿವನ ಡಂಗುರ' ಕಾದಂಬರಿ. ಆಧುನಿಕ ಬದುಕಿಗೆ ಮಾನವೀಯ ಮೌಲ್ಯಗಳನ್ನು ಸುಸ್ಥಿರ ಅಭಿವೃದ್ಧಿಯ ಮಾದರಿಗಳನ್ನು ಸೃಜನಶೀಲ ಘಟನೆ ಹಾಗೂ ಪಾತ್ರಗಳನ್ನು ಚಿತ್ರಿಸಿರುವ ಬಗೆಯು ಓದುಗರ ಮನಸ್ಸಿನಲ್ಲಿ ಹೊಸ ಭಾವನೆಗಳನ್ನೂ ಎಚ್ಚರಿಕೆಯನ್ನು ಮೂಡಿಸುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಚಂದ್ರಶೇಖರ ಕಂಬಾರ, (2015), ಶಿವನ ಡುಂಗರ, ಅಂಕಿತ ಪ್ರಕಾಶನ, ಬೆಂಗಳೂರು.
2. ಬರಗೂರು ರಾಮಚಂದ್ರಪ್ಪ (ಪ್ರ.ಸಂ), (2018), ಕನ್ನಡ ಸಾಹಿತ್ಯ ಸಂಗಾತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.